**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.671/2024.**

| | |
|---|---|
| ಪಿರ್ಯಾದುದಾರರುಃ- | ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ<br>ಕೋ-ಆಪರೇಟಿವ್ ಸೊಸೈಟಿ ಲಿ., ಚಂದಾವರ ಶಾಖೆ ,<br>ಪ್ರತಿನಿಧಿಸುವವರು,<br>ವಿನಾಯಕ ತಂದೆ ರಾಮದಾಸ ಮಡಿವಾಳ,<br>ನಿಷ್ಪತ ವ್ಯವಸ್ಥಾಪಕರು,<br>ವಯಸ್ಸು ಸುಮಾರುಃ- 36 ವರ್ಷ,<br>ತಾಲೂಕುಃ- ಹೊನ್ನಾವರ (ಉ.ಕ.). |

**-ವಿರುದ್ಧ-**

| | |
|---|---|
| ಆರೋಪಿಯ ಹೆಸರುಃ- | ರಾಮ ನಾರಾಯಣ ಉಪ್ಪಾರ,<br>ವಯಸ್ಸು ಸುಮಾರುಃ- 30 ವರ್ಷ,<br>ಸಾಕೀನಃ- ಸಿದ್ಧನಭಾವಿ,<br>ಅಂಚೆಃ- ಕುಮಟಾ ,<br>ತಾಲೂಕುಃ- ಕುಮಟಾ (ಉ.ಕ.). |

## ಆಪಾದನೆ

ಶ್ರೀ ಈರಣ್ಣ ಹುಣಶಿಕಟ್ಟಿ, ಬಿ.ಕಾಂ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಪಿರ್ಯಾದಿ ಸಂಸ್ಥೆಯಲ್ಲಿ ಆರೋಪಿಯಾದ ನೀವು Business loan ಖಾತೆ ನಂ.1356 ರಡಿಯಲ್ಲಿ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕರ್ನಾಟಕ ಬ್ಯಾಂಕ್., ಕುಮಟಾ** ಶಾಖೆಯ ಚೆಕ್ ನಂ.646394 ನ್ನು ದಿನಾಂಕ 09-05-2024, ರೂ.82,224/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ನಗದೀಕರಿಸಲು ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂಬ ಭರವಸೆಯನ್ನು ನೀಡಿದ್ದು ಇರುತ್ತದೆ. ಅದರಂತೆ ಪಿರ್ಯಾದಿಯವರು ನಗದೀಕರಿಸುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಬ್ಯಾಂಕ್., ಚಂದಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, Drawers Signature Differs ಎಂಬ ಮೆಮೋದೊಂದಿಗೆ ಸದರಿ ಚೆಕನ್ನು ದಿನಾಂಕ 15-05-2024 ರಂದು ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 30-05-2024 ರಂದು

ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನೀವು ಸ್ವೀಕರಿಸದೇ ಇರುವ ಕಾರಣ ದಿನಾಂಕ 16-06-2024 ರಂದು Unclaimed Return To Sender ಎಂಬ ಶರಾದೊಂದಿಗೆ ವಾಪಾಸ್ ಬಂದಿರುತ್ತದೆ ಹಾಗೂ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು.

ಪ್ರಶ್ನೆ2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ.)

ಸಹಿ ಇದೆ.

**ದಿನಾಂಕಃ- 14-11-2025.**

**(ಈರಣ್ಣ ಹುಣಶಿಕಟ್ಟಿ).,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಹೊನ್ನಾವರ.**

ಆರೋಪಿಯ ಸಹಿಃ- ಸಹಿ ಇದೆ.

****